# ಶ್ರೀರಾಮಕೃಷ್ಣರ ಭಕ್ತ ರಸಿಕ

ಮೂಲ : 'ಶ್ರೀರಾಮಕೃಷ್ಣವಚನವೇದ'

ಕಥೆ : **ಸ್ವಾಮಿ ವಿಮೂರ್ತಾನಂದ**

ಚಿತ್ರ : **ಸದಾಶಿವಂ**


1



ಶ್ರೀರಾಮಕೃಷ್ಣರು ಆಗ ದಕ್ಷಿಣೇಶ್ವರದಲ್ಲಿ ವಾಸವಾಗಿದ್ದರು. ಅನೇಕ ಮಂದಿ ಭಕ್ತರು ಅವರನ್ನು ಭೇಟಿಯಾಗಿ, ಅವರಿಂದ ಆಶೀರ್ವಾದ ಪಡೆಯುತ್ತಿದ್ದರು.

2

ರಸಿಕನೆಂಬ ಜಾಡಮಾಲಿಯು ಅವರ ಕೋಣೆಯ ಹೊರಗೆ ನಿಂತು ಬಹಳ ದಿನಗಳಿಂದ ಅವರನ್ನೇ ನೋಡುತ್ತಿದ್ದ.





3

ಶ್ರೀರಾಮಕೃಷ್ಣರ ಆಶೀರ್ವಾದ ಪಡೆಯಲು ಅವನು ಅತ್ಯಂತ ಕಾತರನಾಗಿದ್ದ. ಅವನು ಶ್ರದ್ಧೆ, ಭಕ್ತಿಗಳಿಂದ ಕೂಡಿ, ಆನಂದದಿಂದ ಇಡೀ ದೇವಾಲಯದ ಆವರಣವನ್ನು ಸ್ವಚ್ಛಗೊಳಿಸುತ್ತಿದ್ದ.

4


ಕೆಲವು ದಿನಗಳ ನಂತರ ಒಂದು ದಿನ ಶ್ರೀರಾಮಕೃಷ್ಣರು ಉದ್ಯಾನದಲ್ಲಿ ಸುತ್ತಾಡುತ್ತಿದ್ದಾಗ...

ಮರವೊಂದರ ಹಿಂದೆ ನಿಂತಿದ್ದ ರಸಿಕನು ಯೋಚಿಸಿದ...



5


ಶ್ರೀರಾಮಕೃಷ್ಣರು ಹಿಂದಿರುಗುತ್ತಿದ್ದಾಗ ರಸಿಕನು ಭಕ್ತಿಪೂರ್ವಕವಾಗಿ ಅವರಿಗೆ ಸಾಷ್ಟಾಂಗ ನಮಸ್ಕಾರ ಮಾಡಿ ಅಳತೊಡಗಿದ.




6

ಅಂದಿನಿಂದ ರಸಿಕನು ಶ್ರೀರಾಮಕೃಷ್ಣರಲ್ಲಿ ಸಂಪೂರ್ಣ ಶರಣಾಗತಿಯ ಭಾವವನ್ನು ಹೊಂದಿದ್ದನು.
ಈ ಭಾವದಿಂದಲೇ ಅವನು ತನ್ನ ಕೆಲಸಗಳನ್ನು ಮಾಡಿಕೊಂಡು ಹೋಗುತ್ತಿದ್ದ.
ಅವನನ್ನು ಕಂಡಾಗಲೆಲ್ಲಾ ಶ್ರೀರಾಮಕೃಷ್ಣರು ಅವನನ್ನು ಮಾತನಾಡಿಸುತ್ತಿದ್ದರು.


7




8

ಒಬ್ಬ ವ್ಯಕ್ತಿಯ ಆಧ್ಯಾತ್ಮಿಕ ಬೆಳವಣಿಗೆಯಲ್ಲಿ ಅಷ್ಟಪಾಶಗಳು ತಡೆಯಾಗಿರುತ್ತವೆ. ಅದರಲ್ಲೊಂದು ಜಾತಿಗರ್ವ. ಹಲವು ಬಾರಿ ಶ್ರೀರಾಮಕೃಷ್ಣರು ರಸಿಕನ ಗುಡಿಸಿಲಿಗೆ ಹೋಗಿ ಅವನ ಮನೆಯ ಪಾಯಿಖಾನೆಯನ್ನು ತಮ್ಮ ಉದ್ದವಾದ ಕೂದಲಿನಿಂದ ಒರೆಸಿ ಸ್ವಚ್ಛಗೊಳಿಸುತ್ತಿದ್ದರು. ಇದರಿಂದ ತಮ್ಮ ಜಾತಿಭಾವ ತೊಲಗಬೇಕೆಂದು ಅವರು ಹೀಗೆ ಮಾಡುತ್ತಿದ್ದರು. ಅವರು ಜಗನ್ಮಾತೆಯನ್ನು ಪ್ರಾರ್ಥಿಸುತ್ತಿದ್ದರು.

9




10
ರಸಿಕನು ಹೂದೋಟದ ಒಂದು ಮೂಲೆಯಲ್ಲಿ ತುಳಸೀಗಿಡಗಳನ್ನು ನೆಟ್ಟಿದ್ದ.
ನೋಡು, ರಸಿಕ! ಶ್ರೀರಾಮಕೃಷ್ಣರನ್ನು ನೋಡಿ ಅವನೂ ಜಪ, ಧ್ಯಾನ ಮಾಡುತ್ತಿದ್ದಾನೆ.
ಶ್ರೀರಾಮಕೃಷ್ಣರನ್ನೇ ಅವನು ದೇವರೆಂದು ಭಾವಿಸುತ್ತಿದ್ದಾನೆ. ಅವನು ನಮ್ಮಂತಲ್ಲ; ಪ್ರತಿದಿನ ತಪ್ಪದೆ ಅವನು ಸಾಧನೆ ಮಾಡುತ್ತಾನೆ. ಅವನಿಗೆ ನಾವು ತೊಂದರೆ ಕೊಡಬಾರದು.
11
ರಸಿಕನು ತನ್ನ ಜಪ, ಧ್ಯಾನವನ್ನು ಪ್ರಾಮಾಣಿಕವಾಗಿ ಎಡೆಬಿಡದೆ ಮಾಡುತ್ತಿದ್ದ. ಅವನು ಒಬ್ಬ ಉತ್ತಮ ಭಕ್ತನಾಗಿ ಜೀವಿಸಿದ.
12
ದಿನಗಳು ಕಳೆದವು. ಶ್ರೀರಾಮಕೃಷ್ಣರು ದೇಹತ್ಯಾಗ ಮಾಡಿದರು. ಶ್ರೀರಾಮಕೃಷ್ಣರ ಅಗಲಿಕೆ ರಸಿಕನಿಗೆ ಸಹಿಸಲು ಅಸಾಧ್ಯವಾಯಿತು. ಕೆಲವು ದಿನಗಳ ನಂತರ ಅವನಿಗೆ ಕಾಯಿಲೆಯುಂಟಾಯಿತು. ಅವನು ಬಹಳ ಕಾಲ ನರಳಿದ.
ಸ್ವಾಮಿ, ನನಗೆ ನಿಮ್ಮ ಆರೋಗ್ಯದ್ದೇ ಚಿಂತೆಯಾಗಿದೆ. ದಯವಿಟ್ಟು ಈ ಔಷಧಿ ತೆಗೆದುಕೊಳ್ಳಿ.
ಚಿಂತಿಸಬೇಡ. ನಾನು ಯಾವಾಗಲೂ ಶ್ರೀರಾಮಕೃಷ್ಣರ ನಾಮಸ್ಮರಣೆ ಮಾಡುತ್ತಿದ್ದೇನೆ. ಅವರ ನಾಮಜಪಕ್ಕಿಂತ ದೊಡ್ಡ ಔಷಧಿ ಬೇರೇನೂ ಇಲ್ಲ.
13
ಅವರೆಲ್ಲ ಚರ್ಚಿಸುತ್ತಿದ್ದರು..
ನೋಡು, ನಿನ್ನ ತಂದೆ ಯಾವುದೇ ಔಷದಿ ತೆಗೆದುಕೊಳ್ಳುತ್ತಿಲ್ಲ! ಔಷಧಿ ತಿನ್ನದೆ ಅವರ ಕಾಯಿಲೆ ಹೇಗೆ ಗುಣವಾದೀತು?
ಅಮ್ಮ ಅವರ ಕಾಯಿಲೆಯನ್ನು ವಾಸಿ ಮಾಡುವ ಔಷಧಿ ಏನೆಂದು ಗೊತ್ತಿದೆ ನನಗೆ. ದೇವಾಲಯದಿಂದ ತೀರ್ಥ ತಂದು ಕುಡಿಸಿದರೆ ಅವರು ವಾಸಿ ಹೊಂದುವರು.

14


ರಸಿಕನ ಮಗನು ದೇವಾಲಯಕ್ಕೆ ಹೋಗಿ ತೀರ್ಥ ಬೇಕೆಂದು ಕೇಳಿದ..




ರಸಿಕನು ಆ ತೀರ್ಥವನ್ನು ಸ್ವೀಕರಿಸಿದ. ಅವನ ಕಾಯಿಲೆ ಸಂಪೂರ್ಣ ವಾಸಿಯಾಯಿತು. ಅವನು ಮುಂದಿನ ಜೀವನವನ್ನೆಲ್ಲ ಜಪ, ಧ್ಯಾನ ಮಾಡುತ್ತ ಕಳೆದ...

15

ರಸಿಕನ ಕೊನೆಗಾಲ ಬಂತು. ಕೊನೆಯ ದಿನದಂದು ಅವನು ತನ್ನ ಬಳಿಯಿದ್ದವರಿಗೆ ಹೇಳಿದ : ನನ್ನನ್ನು ತುಳಸೀವನಕ್ಕೆ ಕರೆದುಕೊಂಡು ಹೋಗಿ ...
ಅಲ್ಲಿ ಅವನು ಜಪಮಾಲೆಯಿಂದ ಜಪ ಮಾಡತೊಡಗಿದ. ಅರ್ಧಗಂಟೆಯಲ್ಲಿ ಅವನ ಕಣ್ಣು ಮಂಜಾಯಿತು.
ಆ ಕೂಡಲೇ ಅವನು ಜೋರಾಗಿ ಧ್ವನಿ ಮಾಡಿ ಹೇಳಿದ ...




ಅದೇ ಅವನ ಕೊನೆಯ ನುಡಿಗಳು. ರಸಿಕನ ಮುಂದೆ ಶ್ರೀರಾಮಕೃಷ್ಣರು ಕಾಣಿಸಿಕೊಂಡು, ಅವನನ್ನು ತನ್ನ ದಿವ್ಯಧಾಮಕ್ಕೆ ಕರೆದುಕೊಂಡು ಹೋದರು.



ನಂದನಾರ್ ಎಂಬ ಶಿವಭಕ್ತನು ದೇವಾಲಯದ ಹೊರಗಿನಿಂದ ಮಾತ್ರ ದೇವರನ್ನು ಕಂಡು ಪ್ರಾರ್ಥಿಸುತ್ತಿದ್ದ. ಆದರೆ ಅವನ ಭಕ್ತಿಯಿಂದಾಗಿ ಅವನು ಶಿವನಲ್ಲಿ ಲೀನನಾದ. ರಸಿಕನೂ ಅದೇ ರೀತಿ ಶ್ರೀರಾಮಕೃಷ್ಣರನ್ನು ಅವರ ಕೋಣೆಯ ಹೊರಗೆ ನಿಂತು ನೋಡುತ್ತಿದ್ದ. ಅವನು ತನ್ನ ಭಕ್ತಿಯಿಂದ ಶ್ರೀರಾಮಕೃಷ್ಣರಲ್ಲಿ ಒಂದಾದ. ಭಕ್ತಿಗೆ ಜಾತಿಭೇದವೆಲ್ಲಿದೆ?